## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 476/2019

**ಸಾಕ್ಷಿಯನ್ನು ದಿಃ 10.02.2026 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಶ್ರೀಧರ ಡಿ | ಸಿಡಬ್ಲ್ಯೂ: 3 | ಪಿಡಬ್ಲ್ಯೂ: 1 |
| ಗಂಡನ ಹೆಸರು | ಲೇಟ್ ದೊಡ್ಡ ಸಿದ್ದಯ್ಯ | | |
| ವಯಸ್ಸು | 47 ವರ್ಷ | | |
| ಕೆಲಸ | ಅಬಕಾರಿ ಉಪ ನೀರೀಕ್ಷಕ. | | |
| ವಾಸಸ್ಥಳ | ಯಲಹಂಕ ವಲಯ ,<br>ಬೆಂಗಳೂರು. | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ದಿನಾಂಕಃ 28.06.1999 ರಿಂದ 03.02.2021 ರವರೆಗೆ ಹುಣಸೂರು ಅಬಕಾರಿ ನೀರಿಕ್ಷಕರ ಕಛೇರಿಯಲ್ಲಿ ಅಬಕಾರಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 13.03.2019 ರಂದು ಚಾಸಾ-5 ರವರ ಜೊತೆ ಸಹೋದ್ಯೋಗಿಗಳಾದ ಚಾಸಾ-4 ಮತ್ತು ರಾಜೇಂದ್ರ ಎನ್ ರವರೊಂದಿಗೆ ಅಬಕಾರಿ ಗಸ್ತು ಕಾರ್ಯವನ್ನು ಹುಣಸೂರು ಪಟ್ಟಣದ ಶಬ್ಬೀರ್ ನಗರದಲ್ಲಿ ನಡೆಸುತ್ತಿದ್ದಾಗ ಮಧ್ಯಾಹ್ನ ಸುಮಾರು 1.00 ಗಂಟೆಗೆ ಚಾಸಾ-5 ರವರಿಗೆ ಸೇಂದಿ ಸಾಗಾಣಿಕೆ ಮಾಡುತ್ತಿದ್ದಾರೆ ಎಂದು ಖಚಿತ ಮಾಹಿತಿ ಬಂತು. ಶಬ್ಬೀರ್ ನಗರದ ಸಾಯಿ ಬಾಬಾ ದೇವಸ್ಥಾನದ ಹತ್ತಿರ ಚಾಸಾ-1 ಮತ್ತು 2 ರವರನ್ನು ಪಂಚರಾಗಿ ಬರಮಾಡಿಕೊಂಡು ನಮಗೆ ಬಂದ ಮಾಹಿತಿಯನ್ನು ಅವರಿಗೆ ತಿಳಿಸಿ ಪಂಚರಾಗಿ ಸಹಕರಿಸಲು ಕೊರಿಕೊಂಡ ಮೇರೆಗೆ ಅವರು ಒಪ್ಪಿಕೊಂಡರು ನಂತರ ಅವರೊಂದಿಗೆ ನಾವೆಲ್ಲರೂ ಇಲಾಖಾ ವಾಹನದಲ್ಲಿ ಸಿದ್ದನಕೊಪ್ಪಲು ರಸ್ತೆಯ ಹತ್ತಿರ ಹೋದೆವು. ಅಲ್ಲಿ ಇರುವ ಸಣ್ಣ ಸೇತುವೆಯ ಹತ್ತಿರ ನಾವೆಲ್ಲರೂ ನಿಂತೆವು. ಮಧ್ಯಾಹ್ನ ಸುಮಾರು 1.30 ಗಂಟೆಗೆ ಕಿರಿಜಾಜಿ ರಸ್ತೆ ಕಡೆಯಿಂದ ಒಂದು ದ್ವಿಚಕ್ರ ವಾಹನ ಬರುತ್ತಿರುವುದು ಕಂಡು ಬಂತು. ಸದರಿ ವಾಹನವನ್ನು ಸುಮಾರು 50 ಮೀ ದೂರದಲ್ಲಿ ನೋಡಿದಾಗ ಅದರ ಸೀಟಿನ ಹಿಂಭಾಗದಲ್ಲಿ 2 ಕ್ಯಾನ್ ಗಳನ್ನು ಸಿಕ್ಕಿಸಿರುವುದು ಕಂಡು ಬಂತು.

ಅನುಮಾನದ ಮೇರೆಗೆ ಸದರಿ ವಾಹನವನ್ನು ತಡೆದು ನಿಲ್ಲಿಸಿದೆವು. ನಂತರ ಸದರಿ ವಾಹನದ ಚಾಲಕನ ಹೆಸರು ವಿಳಾಸ ಕೇಳಲಾಗಿ ವಾಸು ಬಿನ್ ಅಣ್ಣ ದೊರೈ ಸಾಯಿಬಾಬಾ ದೇವಸ್ಥಾನದ ಪಕ್ಕ ರಸ್ತೆಯಲ್ಲಿ ಗುಡಿಸಲು ಹಾಕಿಕೊಂಡು ವಾಸ ಮಾಡುತ್ತಿರುವುದಾಗಿ ಹಾಗೂ ಖಾಯಂ ವಿಳಾಸ ತಮಿಳುನಾಡು ಎಂದು ತಿಳಿಸಿದ. ಸದರಿ ಕ್ಯಾನ್ ಗಳಲ್ಲಿ ಏನಿದೆ ಎಂದು ಕೇಳಲಾಗಿ ಆತ ಉತ್ತರಿಸಲಿಲ್ಲ. ಸದರಿ ವಾಹನ ಮತ್ತು ಕ್ಯಾನ್ ಗಳಲ್ಲಿ ಏನಿದೆ ಎಂಬ ಬಗ್ಗೆ ಶೋಧನೆ ನಡೆಸುವ ಸಲುವಾಗಿ ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆಯಲು ಸಾಕಷ್ಟು ಕಾಲಾವಕಾಶ ಇಲ್ಲದೇ ಇದ್ದ ಕಾರಣ ಕರ್ನಾಟಕ ಅಬಕಾರಿ ಕಾಯ್ದೆಯ ಕಲಂ 54 ರ ಅಡಿಯಲ್ಲಿ ಶೋಧನಾ ಸಮುಚಿತ ವರದಿಯನ್ನು ಚಾಸಾ-5 ರವರು ಚಾಸಾ-1 ಮತ್ತು 2 ರವರ ಸಮಕ್ಷಮ ತಯಾರಿಸಿದರು. ನಂತರ ಪಂಚರ ಸಮಕ್ಷಮ 2 ಕ್ಯಾನ್ ಗಳನ್ನು ವಾಹನದಿಂದ ಕೆಳಗೆ ಇಳಿಸಿ ಅದರ ಮುಚ್ಚಳ ತೆಗೆದು ನೋಡಿದಾಗ ಘಾಟು ವಾಸನೆಯಿಂದ ಕೂಡಿತ್ತು ಹಾಗೂ ಅದರೊಳಗೆ ಬಿಳಿ ಬಣ್ಣದ ದ್ರವ ಇತ್ತು. ಅದು ಸೇಂದಿ ಎಂದು ಖಚಿತಪಡಿಸಿಕೊಂಡೆವು.

ಸದರಿ ಅಸಾಮಿಯ ಬಳಿ ಅದನ್ನು ಎಲ್ಲಿಂದ ತಂದೆ ಏಕೆ ಸಾಗಾಣಿಕೆ ಮಾಡುತ್ತಿದ್ದೀಯಾ ಎಂದು ಕೇಳಲಾಗಿ ಆತ ಉತ್ತರಿಸಲಿಲ್ಲ. ಅದನ್ನು ಸಾಗಾಣಿಕೆ ಮಾಡಲು ರಹದಾರಿ ವಗೈರೆ ಇದೆಯೇ ಎಂದು ಕೇಳಲಾಗಿ ಇಲ್ಲ ಎಂದು ತಿಳಿಸಿದ. ಈ ರೀತಿ ಸಾಗಾಣಿಕೆ ಮಾಡುವುದು ಅಪರಾಧ ಎಂದು ಆತನಿಗೆ ಹೇಳಿ 2 ಕ್ಯಾನ್ ಗಳಿಂದ ತಲಾ 1 ಲೀಟರ್ ನಂತೆ ಒಟ್ಟು 2 ಲೀಟರ್ ಸೇಂದಿಯನ್ನು ರಾಸಾಯನಿಕ ಪರೀಕ್ಷೆ ಗಾಗಿ ಮಾದರಿಗಾಗಿ ತಲಾ 1 ಲೀಟರ್ ನ ಪ್ಲಾಸ್ಟಿಕ್ ಕ್ಯಾನ್ ನಲ್ಲಿ ಸಂಗ್ರಹಿಸಲಾಯಿತು. ಸದರಿ ದ್ವಿ ಚಕ್ರ ವಾಹನವನ್ನು ನೋಡಲಾಗಿ ಅದು ಕೆಂಪು ಹಾಗೂ ಕಪ್ಪು ಮಿಶ್ರಿತ ಬಣ್ಣದ ಸಿಟಿ 100 ದ್ವಿ ಚಕ್ರ ವಾಹನ ಆಗಿದ್ದು ಅದರ ನೋಂದಣಿ ಸಂಖ್ಯೆ ಟಿ ಎನ್ 58 ಸಿ 3325 ಆಗಿತ್ತು. ಅದರ ಚಾಸಿಸ್ ಮತ್ತು ಇಂಜಿನ್ ಸಂಖ್ಯೆಯನ್ನು ಮಹಜರಿನಲ್ಲಿ ಬರೆಯಲಾಗಿದೆ. ಈ ಬಗ್ಗೆ ಸ್ಥಳದಲ್ಲಿ ಮಧ್ಯಾಹ್ನ 1.50 ರಿಂದ 2.30 ರವರೆಗೆ ಮಹಜರು ಕ್ರಮ ಜರುಗಿಸಲಾಯಿತು. ಚಾಸಾ-5 ರವರು ಹೇಳಿದಂತೆ ನನ್ನ ಕೈ ಬರವಣಿಗಯಲ್ಲಿ ಮಹಜರನ್ನು ಬರೆದಿದ್ದೇನೆ. ಅದನ್ನು ಈಗ ನೋಡುತ್ತಿದ್ದು ನಿಪಿ-1 ಎಂದು , ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಂತರ ಸದರಿ ವಾಹನ ಮತ್ತು ಮುದ್ದೆ ಮಾಲನ್ನು ಇಲಾಖಾ ವಶಕ್ಕೆ

ಪಡೆದು ಆರೋಪಿಯನ್ನು ವಶಕ್ಕೆ ಪಡೆಯಲಾಯಿತು. ಆತನನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ. ಮುದ್ದೆ ಮಾಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ತಲಾ 1 ಲೀಟರ್ ನ 2 ಕ್ಯಾನ್ ಗಳನ್ನು ಹಾಗೂ 2 ದೊಡ್ಡ ಕ್ಯಾನ್ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು ಮಾ 1 ರಿಂದ 4 ಎಂದು ಗುರುತಿಸಲಾಯಿತು. ನಂತರ ಚಾಸಾ–5 ರವರು ಈ ಬಗ್ಗೆ ಮುಂದಿನ ಕ್ರಮ ಕೈಗೊಂಡರು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಲ್ ಕೆ ಜೆ ವಕೀಲರಿಂದಃ**

ಈ ಘಟನೆ ನಡೆಯಿತು ಎನ್ನುವ ಲೋಕ ಸಭಾ ಚುನಾವಣೆಯ ಸಮಯ ಆಗಿತ್ತು ಎಂದರೆ ಸರಿ. ಹುಣಸೂರು ಅಬಕಾರಿ ವಲಯದಲ್ಲಿ ಒಬ್ಬರು ಅಬಕಾರಿ ನಿರೀಕ್ಷಕರು , ಒಬ್ಬ ಅಬಕಾರಿ ಉಪನಿರೀಕ್ಷಕ ಮತ್ತು 4 ಜನ ಅಬಕಾರಿ ಪೇದೆಗಳು ಇರುತ್ತಾರೆ ಎಂದರೆ ಒಬ್ಬ ನಿರೀಕ್ಷಕ , ಇಬ್ಬರೂ ಉಪ ನಿರೀಕ್ಷಕರು ಮತ್ತು 5 ಜನ ಪೇದೆಗಳು ಹಾಗೂ ಇಬ್ಬರೂ ಮುಖ್ಯ ಪೇದೆಗಳು ಇರುತ್ತಾರೆ. ಲೋಕಸಭಾ ಚುನಾವಣೆ ಇದ್ದ ಕಾರಣ ಮೇಲೆ ಹೇಳಿದ ಸಿಬ್ಬಂದಿಗಳೆಲ್ಲಾ ಹಂಚಿಕೆಯಾಗಿ ತಾಲ್ಲೂಕಿನಾದ್ಯಂತ ಕರ್ತವ್ಯ ನಿರ್ವಹಿಸುತ್ತಿದ್ದೆವು ಎಂದರೆ ಆ ರೀತಿ ಇರಲಿಲ್ಲ. ನಮ್ಮ ಕಛೇರಿಯ ಅಬಕಾರಿ ನೀರಿಕ್ಷಕರು ಮತ್ತು ಉಪ ನೀರಿಕ್ಷಕರು ಚುನಾವಣಾ ಅಧಿಕಾರಿಯಾಗಿಯೂ ಕರ್ತವ್ಯ ನಿರ್ವಹಿಸುತ್ತಿದ್ದರು ಎಂದರೆ ಇಲ್ಲ. ನಮ್ಮ ಕಛೇರಿಯ ಅಬಕಾರಿ ನೀರಿಕ್ಷಕರು ಮತ್ತು ಉಪ ನೀರೀಕ್ಷಕರು ಚುನಾವಣಾ ಅಧಿಕಾರಿಗಳಾಗಿ ಮತ್ತು ಉಳಿದ ಸಿಬ್ಬಂದಿಗಳಾದ ನಾವು ತಂಡದ ರೂಪದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮಾಹಿತಿ ಚಾಸಾ–5 ರವರಿಗೆ ಬಂತು. ಚಾಸಾ–5 ರವರಿಗೆ ಮಾಹಿತಿ ಬಂದಾಗ ನೀವೆಲ್ಲರೂ ಎಲ್ಲಿದ್ದೀರಿ ಎಂದರೆ ಅವರಿಗೆ ಎಷ್ಟು ಹೊತ್ತಿಗೆ ಮಾಹಿತಿ ಬಂತು ಎಂದು ಗೊತ್ತಿಲ್ಲ ಅವರು ನಮ್ಮನ್ನು ಇಲಾಖಾ ವಾಹನದಲ್ಲಿ ಕೂರಿಸಿಕೊಂಡು ಹೋದರು. ಇಲಾಖಾ ವಾಹನದಲ್ಲಿ ಬರುವ ಸಂದರ್ಭದಲ್ಲಿ ನಾವೆಲ್ಲರೂ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆವು. ಚುನಾವಣಾ ಸಂದರ್ಭವಾಗಿದ್ದ ಕಾರಣ ನಮ್ಮನ್ನು ಕಛೇರಿಯಲ್ಲಿ ಇರಲು ಬಿಡುವುದಿಲ್ಲ, ಬೇರೆ ಬೇರೆ ಇಲಾಖೆಯೊಂದಿಗೆ ಚುನಾವಣಾ ಕರ್ತವ್ಯಕ್ಕೆ ನೇಮಕ ಮಾಡಲಾಗುತ್ತದೆ ಎಂದರೆ

ಎಲ್ಲಾ ಸಿಬ್ಬಂದಿಗಳನ್ನು ಚುನಾವಣಾ ಕರ್ತವ್ಯಕ್ಕೆ ನೇಮಕ ಮಾಡುವುದಿಲ್ಲ. ಚಾಸಾ-1 ಮತ್ತು 2 ರವರನ್ನು ಸಾಯಿಬಾಬಾ ದೇವಸ್ಥಾನದ ಹತ್ತಿರ ಬರಮಾಡಿಕೊಂಡೆವು. ಸಾಯಿ ಬಾಬಾ ದೇವಸ್ಥಾನ ಸಿದ್ದನಕೊಪ್ಪಲು ಗ್ರಾಮದ ಎದುರುಗಡೆ ಇದೆ ಎಂದರೆ ಸರಿ. ನಾವು ಸ್ಥಳಕ್ಕೆ ಹೋಗಿಲ್ಲ ಮತ್ತು ಪಂಚರನ್ನು ಬರಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಕಿರಿಜಾಜಿ ರಸ್ತೆಯಲ್ಲಿ ಸಿದ್ದನ ಕೊಪ್ಪಲು ಗ್ರಾಮಕ್ಕೆ ಹೋಗಲು ಎರಡು ರಸ್ತೆಗಳಿದ್ದು ನೀವು ಯಾವ ರಸ್ತೆಯಲ್ಲಿ ನಿಂತಿದ್ದೀರಿ ಎಂದರೆ ನೆನಪಿಲ್ಲ. ನಿಪಿ-1 ರ ಮಹಜರಿನಲ್ಲಿ ಚೆಕ್ಕು ಬಂದಿಯನ್ನು ನಮೂದಿಸಿದ್ದೇನೆ. ಮಹಜರನ್ನು ನೋಡದೇ ಚೆಕ್ಕು ಬಂದಿಯನ್ನು ಈಗ ಹೇಳಲಾಗುತ್ತದೆಯೇ ಎಂದರೆ ಸ್ವಲ್ಪ ತಪ್ಪಾಗಬಹುದು ಈಗ ನೆನಪಿಲ್ಲ. ಕಿರಿಜಾಜಿ ಹುಣಸೂರು ರಸ್ತೆ ಉತ್ತರ ದಕ್ಷಿಣವಾಗಿ ಹಾದು ಹೋಗುತ್ತದೆ ಎಂದರೆ ನೆನಪಿಲ್ಲ. ಕಿರಿಜಾಜಿ ಹುಣಸೂರು ರಸ್ತೆಯಿಂದ ಬಲಭಾಗದಲ್ಲಿ ಪೂರ್ವ ದಿಕ್ಕಿಗೆ ಸಿದ್ದನ ಕೊಪ್ಪಲು ಗ್ರಾಮಕ್ಕೆ ಹೋಗುವ ರಸ್ತೆ ಇದೆ ಎಂದರೆ ನೆನಪಿಲ್ಲ. ಸದರಿ ಸಿದ್ದನಕೊಪ್ಪಲು ಗ್ರಾಮಕ್ಕೆ ಹೋಗುವ ರಸ್ತೆಯ ವಿರುದ್ಧ ದಿಕ್ಕಿಗೆ ಅಂದರೆ ಪಶ್ಚಿಮ ದಿಕ್ಕಿಗೆ ಸಾಯಿ ಬಾಬಾ ದೇವಸ್ಥಾನದ ಜಾಗದ ಮಾಲೀಕರಾದ ಲಕ್ಷ್ಮಣೇಗೌಡರವರ ಜಮೀನಿದೆ ಎಂದರೆ ಈಗ ನೆನಪಿಲ್ಲ. ಮಹಜರಿನಲ್ಲಿ ಬರೆದ ವಿಷಯಗಳಿಗೆ ಅನುಗುಣವಾಗಿ ನಾನು ಈ ದಿನ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಆ ದಿನ ವಾಸ್ತವವಾಗಿ ಏನೆಲ್ಲಾ ನಡೆದಿದೆ ಅದರ ಬಗ್ಗೆ ಸಾಕ್ಷಿ ಹೇಳುತ್ತಿದ್ದೇನೆ. ನಿಪಿ-1 ನ್ನು ಸ್ಥಳದಲ್ಲಿ ಬರೆದಿದ್ದಲ್ಲಿ ನನಗೆ ಚೆಕ್ಕು ಬಂದಿ ಗೊತ್ತಾಗುತ್ತಿತ್ತು, ಅದನ್ನು ಕಛೇರಿಯಲ್ಲಿ ತಯಾರಿಸಿದ ಕಾರಣ ಚೆಕ್ಕು ಬಂದಿ ಹೇಳಲು ಆಗುತ್ತಿಲ್ಲ ಎಂದರೆ ಸರಿಯಲ್ಲ.

ಸಾಯಿ ಬಾಬಾ ದೇವಸ್ಥಾನದ ಪಕ್ಕ ಲಕ್ಷ್ಮಣೇಗೌಡರ ಜಮೀನಿನಲ್ಲಿ ಇಟ್ಟಿಗೆ ತಯಾರಿಸುತ್ತಿದ್ದರು ಎಂದರೆ ಗೊತ್ತಿಲ್ಲ. ಆರೋಪಿ ಕೆಲಸದವರನ್ನು ಕರೆದುಕೊಂಡು ಬಂದು ಇಟ್ಟಿಗೆ ತಯಾರಿಕೆಯ ಕೆಲಸ ಮಾಡಿಸುತ್ತಿದ್ದರು ಎಂದರೆ ಗೊತ್ತಿಲ್ಲ. ಆರೋಪಿ ದ್ವಿ ಚಕ್ರ ವಾಹನದಲ್ಲಿ ತಲಾ 35 ಲೀಟರ್ ಸಾಮರ್ಥ್ಯ ದ ಎರಡು ಕ್ಯಾನ್ ಗಳಲ್ಲಿ ಯಾವುದೇ ಮದ್ಯವನ್ನು ಸಾಗಾಣಿಕೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಯಾವುದೇ ವಿಚಾರಣೆ ಮಾಡದೇ ಇಟ್ಟಿಗೆ ಕೆಲಸ ಮಾಡುತ್ತಿದ್ದ ವ್ಯಕ್ತಿಯನ್ನು ವಶಕ್ಕೆ ತೆಗೆದು ಕೊಂಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿಯನ್ನು ಸೇಂದಿ ಸಾಗಾಣಿಕೆ ಮಾಡುತ್ತಿದ್ದಾಗ ವಶಕ್ಕೆ

ಪಡೆದುಕೊಂಡಿದ್ದಲ್ಲಿ ಸದರಿ ಸೇಂದಿಯನ್ನು ಯಾರ ತೋಟದಿಂದ ತೆಗೆದುಕೊಂಡು ಬಂದಿದ್ದಾರೆ ಎಂಬ ಬಗ್ಗೆ ತೋಟದ ಮಾಲೀಕರನ್ನು ವಿಚಾರಣೆಗೆ ಒಳಪಡಿಸುತ್ತಿದ್ದೆವು ಎಂದರೆ ಸರಿಯಲ್ಲ. ಆರೋಪಿಯನ್ನು ಯಾವುದೇ ಮಾಲುಗಳ ಸಮೇತ ದಸ್ತಗಿರಿ ಮಾಡದೇ ಇರುವ ಕಾರಣ ತೋಟದ ಮಾಲೀಕರನ್ನು ವಿಚಾರಣೆಗೆ ಒಳಪಡಿಸಿಲ್ಲ ಎಂದರೆ ಸರಿಯಲ್ಲ.

ಸಾಯಿ ಬಾಬಾ ದೇವಸ್ಥಾನದ ಪಕ್ಕ ಪ್ರಾವಿಷನ್ ಸ್ಟೋರ್ , ಕಾರ್ಪೆಂಟರ್ ಶಾಪ್ , ಟೈಲರ್ ಅಂಗಡಿ , ಶಾಮೀಯಾನದ ಅಂಗಡಿ ಇದೆ ಎಂದರೆ ಸರಿ. ಸದರಿ ರಸ್ತೆ ಕಿರಿಜಾಜಿ , ರಾಮಪಟ್ಟಣ ಮತ್ತು ಇತರ ಗ್ರಾಮಗಳಿಗೆ ಹೋಗುವ ರಸ್ತೆಯಾಗಿದ್ದರಿಂದ ಹೆಚ್ಚಿನ ಜನ ಸಂಚಾರ ಇರುತ್ತದೆ ಎಂದರೆ ಇಲ್ಲ. ನಿಪಿ–1 ರ ಮಹಜರಿಗೆ ಸ್ಥಳೀಯರ ಸಹಿಯನ್ನು ಪಡೆದುಕೊಂಡಿಲ್ಲ ಎಂದರೆ ಸರಿ. ಅದಗಾಲೇ ಇಬ್ಬರೂ ಪಂಚರು ನಮ್ಮ ಬಳಿ ಇದ್ದರು. ಸ್ಥಳದಲ್ಲಿ ಮಹಜರು ಮಾಡಿದ್ದಲ್ಲಿ ಸ್ಥಳಿಯರ ಸಹಿಯನ್ನು ಪಡೆದುಕೊಳ್ಳಲಾಗುತ್ತಿತ್ತು, ಸ್ಥಳದಲ್ಲಿ ಮಹಜರು ಮಾಡದೇ ಇರುವ ಕಾರಣ ಕಛೇರಿಗೆ ಬಂದವರ ಸಹಿಯನ್ನು ನಿಪಿ–1 ಕ್ಕೆ ಪಡೆಯಲಾಗಿದೆ ಎಂದರೆ ಸರಿಯಲ್ಲ. ನಾವು ಸ್ಥಳಕ್ಕೆ ಹೋಗಿಲ್ಲ , ಆರೋಪಿಯನ್ನು ಸೇಂದಿ ಸಮೇತ ವಶಕ್ಕೆ ಪಡೆದಕೊಂಡಿಲ್ಲ , ಯಾವುದೇ ಮಹಜರು ಕ್ರಮವನ್ನು ಸ್ಥಳದಲ್ಲಿ ಮಾಡಿಲ್ಲ ಎಂದರೆ ಸರಿಯಲ್ಲ. ಚುನಾವಣಾ ಸಮಯವಾಗಿದ್ದ ಕಾರಣ ಮೇಲಾಧಿಕಾರಿಗಳ ಸೂಚನೆಯ ಮೇರೆಗೆ ಇಲಾಖೆಯ ಅಂಕಿ ಅಂಶಕೋಸ್ಕರ ಆರೋಪಿಯನ್ನು ದಸ್ತಗಿರಿ ಮಾಡಿ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಕೇಸಿಗೆ ಅನುಕೂಲವಾಗಲೀ ಎಂದು ಮು ಮಾ 1 ರಿಂದ 4 ನ್ನು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.